## ಬಿಗ್ ಬಾಸ್‌ಗೆ ಕನ್ನಡ ಬೇಡವೆ?

ಬಹುತೇಕ ವಾಹಿನಿಗಳಲ್ಲಿ ಕಂಗ್ಲಿಷ್ ಸಾಮಾನ್ಯವಾಗಿದೆ. ಇದರಿಂದ ಕನ್ನಡದ ಒಂದೊಂದೇ ಪದಗಳು ಕನ್ನಡಿಗರ ಬಾಯಿಯಿಂದಲೇ ಮಾಯವಾಗುತ್ತಿವೆ. ಇದಕ್ಕೆ ದೃಶ್ಯ ಮಾಧ್ಯಮಗಳ ಪಾತ್ರ ಪ್ರಮುಖವಾಗಿದೆ. ವಿದ್ಯಾವಂತರು ಮಾತ್ರವಲ್ಲ, ಗ್ರಾಮೀಣ ಪ್ರದೇಶದ ಜನರ ಬಾಯಿಂದಲೂ ಕನ್ನಡ ಪದಗಳನ್ನು ಕಿತ್ತುಕೊಳ್ಳುತ್ತಿವೆ ಈ ಟೀವಿಗಳು.

ಕಲರ್ಸ್ ಕನ್ನಡದ 'ಬಿಗ್ ಬಾಸ್' ಶೋ ವಾರಾಂತ್ಯದಲ್ಲಿ ಸುದೀಪ್ 'ಸೂಪರ್' ಎಂಬ ಪದವನ್ನು ಪ್ರತಿವಾರವೂ ಬಳಸುತ್ತಾರೆ. ಬ್ರೇಕ್, ಕಂಟೆಸ್ಟೆಂಟ್, ಸ್ಟೇಟ್‌ಮೆಂಟ್ ಎನ್ನುವ ಪದಗಳನ್ನು ಹೆಚ್ಚು ಬಳಸುತ್ತಾರೆ. ಸ್ಪರ್ಧಿಗಳು ಅಭಿಪ್ರಾಯ ತಿಳಿಸಲು ಬಳಸುವ ಬೋರ್ಡ್ ಇಂಗ್ಲಿಷ್‌ನಲ್ಲಿ ನೊ–ಎಸ್ ಎಂದಿರುತ್ತದೆ. ಅದರ ಬದಲಿಗೆ ಅಲ್ಲ–ಹೌದು ಫಲಕ ತೋರಿಸಬಹುದಿತ್ತು, ಅಲ್ಲವೆ? ಇನ್ನು ಮುಂದಾದರೂ ಕನ್ನಡ ಪದಗಳ ಬಳಕೆ ಮಾಡಿ ಕನ್ನಡ ಪದಗಳನ್ನು ಉಳಿಸಲಿ, ಕನ್ನಡ ಪದಗಳ ಕೊಲೆ ಮಾಡಬೇಡಿ.

–ಸಿ. ಸಿದ್ದರಾಜು ಆಲಕೆರೆ, ಮಂಡ್ಯ




## ಸ್ವಾಭಿಮಾನಿ ರಾಜು

ಝೀ ಕನ್ನಡದ 'ಸರಿಗಮಪ' ಸೀಸನ್ 21ರ ಸ್ಪರ್ಧೆಯಲ್ಲಿ 6ರಿಂದ 60 ವಯೋಮಾನದವರು ಭಾಗವಹಿಸಿದ್ದಾರೆ. ಇದನ್ನು ನೋಡುವಾಗ ಮಹಾಭಾರತದ 'ಅನಾಯಾಸೇನ ಮರಣಂ ವಿನಾ ದೈನ್ಯೇನ ಜೀವನಂ' ಎಂಬ ಮಾತು ನೆನಪಿಗೆ ಬಂತು. ಇದು ಸ್ವಾಭಿಮಾನವನ್ನು ಹೇಳುವ ಮಾತು. ಈ ಬಾರಿಯ 'ಸರಿಗಮಪ' ಸ್ಪರ್ಧಿ ರಾಜು, ಸಂಕಷ್ಟದಿಂದ ಜೀವನ ನಿರ್ವಹಣೆಯನ್ನು ಮಾಡುತ್ತಿದ್ದಾರೆ. ಅವರು ಕಾರ್ಯಕ್ರಮದಲ್ಲಿ ಭಾಗವಹಿಸಲು ಶ್ರಮಪಟ್ಟು ಬಂದಿದ್ದಾರೆ. ಬಸ್ಸಿಗೆ ಖರ್ಚು ಇಲ್ಲದೆ ಕಾಲ್ನಡಿಗೆಯನ್ನೂ ಸವೆಸಿರುವುದು ಕೇಳಿ ಬೇಸರ ಅನ್ನಿಸಿತು. ಶೋನಲ್ಲಿ ತೀರ್ಪುಗಾರರು ಗಾಯಕ ರಾಜು ಅವರಿಗೆ ಹೂವನ್ನು ಕೊಟ್ಟು ಗೌರವಿಸಿದ ಕ್ಷಣ ಅತ್ಯಂತ ಖುಷಿಯನ್ನು ಕೊಟ್ಟಿತು. ಅವರೇ ಮೆಂಟರ್ ಕೂಡ ಆಗಿರುವುದು ಸ್ಮರಣೀಯ.

–ಕೆ.ಎಸ್. ಪ್ರಭಾಕರ ಗುಪ್ತ, ಹಾಸನ

**ವಾರದ ಪತ್ರ**

## ಪುಸ್ತಕವೂ ದಾಖಲೆಯಾಗಲಿ

ಚಂದನದ 'ಥಟ್ ಅಂತ ಹೇಳಿ' ಕಾರ್ಯಕ್ರಮ ಗಿನ್ನೀಸ್ ದಾಖಲೆ ನಿರ್ಮಿಸುವತ್ತ ಸಾಗುತ್ತಿರುವುದು ಹೆಮ್ಮೆಯ ಸಂಗತಿ. ಈ ಕಾರ್ಯಕ್ರಮ ರೂಪಿಸುತ್ತಿರುವ ಎಲ್ಲರಿಗೂ ಧನ್ಯವಾದಗಳು. ಇದರ ಭಾಗವಾಗಿ ವಿಶೇಷ ಕಾರ್ಯಕ್ರಮಗಳನ್ನೂ ಮಾಡುತ್ತಿದ್ದಾರೆ. ಕಾರ್ಯಕ್ರಮದಲ್ಲಿ ನೀಡುವ ಪುಸ್ತಕದ ಬೆಲೆಯನ್ನೂ ಪ್ರಕಟಿಸಿದರೆ ಅದೂ ಒಳ್ಳೆಯ ಮಾಹಿತಿ ಆಗುತ್ತದೆ. ಪ್ರತಿ ವರ್ಷ ಎಷ್ಟು ಮೌಲ್ಯದ ಪುಸ್ತಕವನ್ನು ನೀಡಲಾಗುತ್ತಿದೆ ಎನ್ನುವುದೂ ದಾಖಲೆಯ ಸಂಗತಿ ಆದೀತು.

–ಸುವರ್ಣ ಎಂ.ಸಿ. ಇಂದ್ರ

## ಜಾನು ಗಂಡನಂತಹ ಪತಿಗಾಗಿ ಪ್ರಾರ್ಥನೆ

ಝೀ ಕನ್ನಡದ 'ಲಕ್ಷ್ಮೀನಿವಾಸ' ಧಾರಾವಾಹಿಯ ಜಾನು ಪಾತ್ರಧಾರಿಯನ್ನು ಆಕೆಯ ಗಂಡ ಪುರುಷೊತ್ತು ಕೂಡದೆ ಪ್ರೀತಿಸುತ್ತಾನೆ. ಈ ಧಾರಾವಾಹಿ ನನಗೆ ತುಂಬಾ ಹಿಡಿಸಿತು. ನಿತ್ಯವೂ ಬಿಡದೇ ನೋಡುತ್ತೇನೆ. ಅಂತಹ ಪತಿ ನನಗೂ ಸಿಗಲಿ ಎಂದು ಪ್ರಾರ್ಥಿಸುತ್ತೇನೆ.

–ಗಾಯತ್ರಿ, ಬೆಂಗಳೂರು

## ಕಲಾವಿದರ ಕಾರ್ಯ ಶ್ಲಾಘನೀಯ

ಹೊಸ ವರುಷದ ಮುನ್ನಾ ದಿನ ಚಂದನದಲ್ಲಿ ರಂಗ ಕಲಾವಿದ ಟಿ.ವಿ. ಕೈಲಾಶ್ ಹಾಗೂ ನಟಿ ಕೃತಿಕಾ ರವೀಂದ್ರ ಅವರ ಸಂದರ್ಶನವನ್ನು ಸೋಮೇಶ್ವರ್ ತುಂಬಾ ಚೆನ್ನಾಗಿ ನಡೆಸಿಕೊಟ್ಟರು. ಕೈಲಾಶ್ ಪ್ರಕಾಶನ ಸಂಸ್ಥೆ ಪ್ರಾರಂಭಿಸಿದವರು. ಅದರ ಜೊತೆ ರಂಗಭೂಮಿಯಲ್ಲಿ ಸಕ್ರಿಯವಾಗಿದ್ದು, ಸಿನಿಮಾ–ಟೀವಿಯಲ್ಲಿ ಅಭಿನಯ ಮಾಡುತ್ತಿದ್ದಾರೆ. ಮಕ್ಕಳ ಸಾಹಿತ್ಯಕ್ಕೆ ಅಮೂಲ್ಯ ಕೆಲಸ ಮಾಡಿದ್ದಾರೆ. ಕೃತಿಕಾ ಮಲೆನಾಡ ಕಲಾವಿದೆ. ಕಂಠದಾನ–ಗಾಯನದ ಮೂಲಕ ಹೆಸರುವಾಸಿಯಾಗಿದ್ದಾರೆ. ಈ ಇಬ್ಬರು ಕಲಾವಿದರ ಕಾರ್ಯ ಶ್ಲಾಘನೀಯ.

–ಭಾರತೀ ಗಂಗಾಧರ್, ಬೆಂಗಳೂರು

## ಈಗ ಪ್ರೇತಗಳ ಸರದಿ!

ಟೀವಿ ಧಾರಾವಾಹಿಗಳಲ್ಲಿ ಅತ್ತೆ ಸೊಸೆ ಕಲಹ, ವಿಷಪ್ರಾಶನ ಸನ್ನಿವೇಶಗಳು ರಾರಾಜಿಸುತ್ತಿದ್ದವು. ಕ್ರಮೇಣ ಸಿನಿಮಾಗಳಿಗೆ ಪೈಪೋಟಿಯೆಂಬಂತೆ ಹಾಡು, ನೃತ್ಯ, ಹೊಡೆದಾಟವೂ ಆರಂಭವಾದವು. ಧಾರಾವಾಹಿಗಳಲ್ಲಿ ಭೂತ ಪ್ರೇತಗಳ ದರ್ಶನವೂ ಆಗುತ್ತಿದೆ. 'ಸೀತಾರಾಮ' (ಝೀ ಕನ್ನಡ), 'ಶಾಂಭವಿ' (ಉದಯ), 'ನೂರು ಜನ್ಮಕೂ' (ಕಲರ್ಸ್ ಕನ್ನಡ) – ಈ ಜಾಡ್ಯ ಉಳಿದ ವಾಹಿನಿಗಳಲ್ಲದೆ ಎಲ್ಲ ಕಥೆಗಳಿಗೂ ಸಾಂಕ್ರಾಮಿಕವಾಗುವ ಲಕ್ಷಣ ಕಾಣುತ್ತಿದೆ. ಮಕ್ಕಳಿಗೆ ಹೆದರಿಸಿ ರಾತ್ರಿ ಅವರು ಬೆಚ್ಚಿ ಬೀಳುವಂತೆ ಮಾಡುವುದು, ಅವರಲ್ಲಿ ಮೌಢ್ಯ ಬಿತ್ತುವ ಈ ಕಾಯಕವನ್ನು ನಿಲ್ಲಿಸಿ ಸಮಾಜಮುಖಿ, ಆಧ್ಯಾತ್ಮಿಕ, ಗುಣಾತ್ಮಕ ಧಾರಾವಾಹಿಗಳನ್ನು ಪ್ರಸಾರ ಮಾಡುವುದು ಒಳಿತು.

–ಕೆ. ಶ್ರೀನಿವಾಸರಾವ್, ಹರಪನಹಳ್ಳಿ

## ವಿದೂಷಕ ವರ

ಧಾರಾವಾಹಿಗಳನ್ನು ನಿರ್ಮಿಸುವವರು ವೀಕ್ಷಕರನ್ನು ಮೂರ್ಖರು ಎಂದು ಭಾವಿಸಿದಂತಿದೆ. ತಾವು ಏನೇ ಪ್ರಸಾರ ಮಾಡಿದರೂ ಒಪ್ಪುತ್ತಾರೆ ಎಂದು ತಿಳಿದಿರುವುದು ಶೋಚನೀಯ. ಕಲರ್ಸ್ ಕನ್ನಡದ 'ನೂರು ಜನ್ಮಕೂ' ಧಾರಾವಾಹಿಯಲ್ಲಿ ನಾಯಕ ಮದುವೆ ಆಗಲಿರುವ ಹುಡುಗಿಗೆ ಮುತ್ತು ಕೊಡಬೇಕು ಎಂದು ಮನೆಯವರ ಕಣ್ಣು ತಪ್ಪಿಸಿ ಅವಳನ್ನು ಮಧ್ಯರಾತ್ರಿ ಹೊರಗೆ ಕರೆದುಕೊಂಡು ಹೋಗುವುದು. ವರ ಪೂಜೆಗೆ ಬರುವಾಗ ವಿದೂಷಕನಂತೆ ವೇಷ ಹಾಕುವುದು ತೀರಾ ಹಾಸ್ಯಾಸ್ಪದ.

–ಎಸ್. ವೇದಗರ್ಭ, ಬೆಂಗಳೂರು

## ಸಮರ್ಥನೆಯಿಲ್ಲದ ಅತಿರೇಕ

ಹೊಸ ವರ್ಷದ ಆಚರಣೆಯನ್ನು ಭರ್ಜರಿಯಾಗಿ ಆಚರಿಸಿದ್ದೂ ಆಯ್ತು! ಕೆಲವು ಪಟ್ಟಣ–ನಗರಗಳಲ್ಲಿ ಮೋಜು, ಮಸ್ತಿ ಜೋರಾಗಿತ್ತು. ಅದರ ಪ್ರಸಾರದಲ್ಲಿ ಸುದ್ದಿ ವಾಹಿನಿಗಳು ಅತಿರೇಕ ಮಾಡಿದವು. ಕೆಲವು ಹೆಣ್ಣುಮಕ್ಕಳ ಚಿತ್ರವನ್ನು ಅನಗತ್ಯ ತೋರಿಸಿದರು. ಅವರ ಖಾಸಗಿತನಕ್ಕೆ ಧಕ್ಕೆ ತರುವುದು ಮಾಧ್ಯಮದ ಕೆಲಸ ಆಗಬಾರದು. ಮತ್ತೊಂದು ಅವಾಂತರಕ್ಕೆ ಮಾಧ್ಯಮ ಕಾಲಿಟ್ಟಿದೆ. ನಮಗೆ ಗೊತ್ತಿರುವ ಹಾಗೆ ವರ್ಷದ ರಾಶಿ ಫಲಗಳನ್ನು ಯುಗಾದಿ ಹಬ್ಬದ ದಿನಕ್ಕೆ ಸರಿಯಾಗಿ ಬರುವ ಹೊಸ ಪಂಚಾಂಗದ ಆಧಾರದ ಮೇಲೆ ನೋಡುತ್ತಾರೆ. ಆದರೆ, 2025ನೇ ಹೊಸ ವರ್ಷದ ಭವಿಷ್ಯದ ನೆಪದಲ್ಲಿ ರಾಶಿಫಲಗಳನ್ನು ಜ್ಯೋತಿಷಿಗಳು ಹೇಳಿದರು. ಅಲ್ಲದೆ, ದೋಷ ನಿವಾರಣೆ, ವ್ರತ ನೇಮ ಹೇಳಿದ್ದನ್ನು ಮರುಪ್ರಸಾರ ಕೂಡ ಮಾಡಿದರು.

–ಆರ್. ವೀರೇಶ್ ಕುಮಾರ್, ಬೆಂಗಳೂರು